ಕರ್ನಾಟಕ ಸರ್ಕಾರ

ಸಂಖ್ಯೆ: ಸಿಇ 216 ಎಂಆರ್‌ಇ 2022

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 08 .02.2023

ಇವರಿಂದ :

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು-560 001.

ಇವರಿಗೆ :

ನಿರ್ದೇಶಕರು,
ಕೃಷಿ ಮಾರಾಟ ಇಲಾಖೆ,
ನಂ.16, 2ನೇ ರಾಜಭವನ ರಸ್ತೆ,
ಬೆಂಗಳೂರು-560 001

ಮಾನ್ಯರೇ,

ವಿಷಯ : ರಾಣೆಬೆನ್ನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೂಲಿಹಳ್ಳಿ ಕೂನಬೇವು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ರೂಪಿಸಿರುವ ನಿವೇಶನಗಳನ್ನು /ಕಟ್ಟಡಗಳನ್ನು ಲೀಜ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು.

ಉಲ್ಲೇಖ : 1) ಸರ್ಕಾರದ ಸಮ ಸಂಖ್ಯೆಪತ್ರ ದಿನಾಂಕ:14.11.2022
2) ತಮ್ಮ ಪತ್ರ ಸಂಖ್ಯೆ: ಕೃಮಾಇ/ಅಭಿವಿ-3/ಲೀಕಂಸೇ/252/2022 ದಿನಾಂಕ:06.02.2023

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2)ರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಉಲ್ಲೇಖಿತ(1)ರ ಪತ್ರ ದಿನಾಂಕ:14.11.2022ರಲ್ಲಿ ರಾಣೆಬೆನ್ನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೂಲಿಹಳ್ಳಿ-ಕೂನಬೇವು ಉಪ ಮಾರುಕಟ್ಟೆಗೆ ಮಾತ್ರ ಸೀಮಿತಗೊಳಿಸಿ, ಪ್ರಾಂಗಣದಲ್ಲಿನ ನಿವೇಶನಗಳನ್ನು ಲೀಸ್ ಕಂ ಸೇಲ್ / ಲೀವ್ ಅಂಡ್ ಲೈಸನ್ಸ್ ಆಧಾರದ ಮೇಲೆ ಹಂಚಿಕೆ ಮಾಡಲು ಅನುಮತಿ ನೀಡಲಾದ 05 ಅಂಶಗಳ ಪೈಕಿ 03 ಅಂಶಗಳನ್ನು ಮಾರ್ಪಡಿಸಿ ಮತ್ತು ಹೊಸದಾಗಿ ಕೋರಿರುವ 03 ಅಂಶಗಳಿಗೆ ರಾಣೆಬೆನ್ನೂರು ಸಮಿತಿಯ ಹೂಲಿಹಳ್ಳಿ-ಕೂನಬೇವು ಉಪ ಮಾರುಕಟ್ಟೆಯ ಹಂಚಿಕೆಗೆ ಸೀಮಿತಗೊಳಿಸಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) (ತಿದ್ದುಪಡಿ) ನಿಯಮಗಳು-2022 ರ ನಿಯಮ 7(4) ರಡಿ ಈ ಕೆಳಕಂಡಂತೆ ಅನುಮತಿ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ

1) ಬ್ಯಾಡಗಿ ಸಮಿತಿಯ ವ್ಯಾಪ್ತಿಯಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವಹಿವಾಟು ನಡೆಸುತ್ತಿರುವ ಪೇಟೆ ಕಾರ್ಯಕರ್ತರನ್ನು ರಾಣೆಬೆನ್ನೂರಿನ ಸ್ಥಳೀಯ ಪೇಟೆ ಕಾರ್ಯಕರ್ತರೆಂದು ಪರಿಗಣಿಸಲು ಅನುಮತಿ ನೀಡಿರುವುದನ್ನು ಕೈಬಿಡಲಾಗಿದೆ.

2) ರಾಣೆಬೆನ್ನೂರು ಸಮಿತಿಯ ಹೂಲಿಹಳ್ಳಿ-ಕೂನಬೇವು ಉಪ ಮಾರುಕಟ್ಟೆ ಪ್ರಾಂಗಣದ ನಿವೇಶನಗಳಲ್ಲಿ/ ಕಟ್ಟಡಗಳಲ್ಲಿ ಶೇ.60ರಷ್ಟು ರಾಣೇಬೆನ್ನೂರು ಸಮಿತಿಯ ಪೇಟೆ ಕಾರ್ಯಕರ್ತರುಗಳಿಗೆ ಹಾಗೂ ಶೇ. 40ರಷ್ಟು ರಾಜ್ಯದಲ್ಲಿನ ಇತರೆ ಮಾರುಕಟ್ಟೆ ಸಮಿತಿಗಳಲ್ಲಿನ ಪೇಟೆ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡುವುದು.

3) ಆಸ್ತಿ ಹಂಚಿಕೆ ನಿಯಮ 2004ರ ನಿಯಮ 7(2)ರ ಷರತ್ತನ್ನು ಒಂದು ಭಾರಿ ಮಾತ್ರ ಸಡಿಲಿಸಿ ರಾಣೆಬೆನ್ನೂರು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈಗಾಗಲೇ ನಿವೇಶನ/ ಅಂಗಡಿ-ವ-ಗೋದಾಮುಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಹಾಗೂ ಕಟ್ಟಡಗಳನ್ನು ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ಹಂಚಿಕೆ ಪಡೆದಿರುವ



Generated from eOffice by RANJITHA V., CO-SO(RV), SECTION OFFICER, COPERATIONSEC on 21/02/2024 02:49 PM

ಪೇಟೆ ಕಾರ್ಯಕರ್ತರುಗಳು ಸಹ ಹೂಲಿಹಳ್ಳಿ-ಕೂನಬೇವು ಉಪ ಮಾರುಕಟ್ಟೆ ಪ್ರಾಂಗಣದ ನಿವೇಶನಗಳು/ ಕಟ್ಟಡಗಳ ಹಂಚಿಕೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿರುವುದನ್ನು ಮುಂದುವರಿಸಲಾಗಿದೆ.

4) ರಾಣೆಬೆನ್ನೂರು ಸಮಿತಿಯ ಪೇಟೆ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಲು ನಿಗಧಿಪಡಿಸಿರುವ ಶೇ. 60ರಷ್ಟು ನಿವೇಶನಗಳ ಸಂಖ್ಯೆಗಳಿಗೆ ಅನುಗುಣವಾಗಿ ಸಾಕಷ್ಟು ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗದಿದ್ದಲ್ಲಿ ಅಂತಹ ನಿವೇಶನಗಳನ್ನು ರಾಜ್ಯದಲ್ಲಿನ ಇತರೆ ಮಾರುಕಟ್ಟೆ ಸಮಿತಿಗಳಲ್ಲಿನ ಪೇಟೆ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಲು ಅವಕಾಶ ಕಲ್ಪಿಸುವುದು.

5) ರಾಜ್ಯದಲ್ಲಿನ ಇತರೆ ಮಾರುಕಟ್ಟೆ ಸಮಿತಿಗಳಲ್ಲಿನ ಪೇಟೆ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಲು ನಿಗಧಿಪಡಿಸಿರುವ ಶೇ.40ರಷ್ಟು ನಿವೇಶನಗಳ ಸಂಖ್ಯೆಗಳಿಗೆ ಅನುಗುಣವಾಗಿ ಸಾಕಷ್ಟು ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗದಿದ್ದಲ್ಲಿ ಅಂತಹ ನಿವೇಶನಗಳನ್ನು ರಾಣೆಬೆನ್ನೂರು ಸಮಿತಿಯ ಪೇಟೆ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಲು ಅವಕಾಶ ಕಲ್ಪಿಸುವುದು.

6) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳ 2004ರ ನಿಯಮ 10 (1)(i)ರಡಿಯಲ್ಲಿ ನಿವೇಶನ ಹಂಚಿಕೆ ಪಡೆದವನು, 3ನೇ ನಿಯಮದ 3ನೇ ಉಪ ನಿಯಮದ ಮೇರೆಗೆ ಈಗಾಗಲೇ ಸಂದಾಯ ಮಾಡಿದ ಮೊಬಲಗನ್ನು ಕಳೆದು, ಹಂಚಿಕೆ ಆದೇಶವನ್ನು ಸ್ವೀಕರಿಸಿದ 90 ದಿನಗಳ ಅವಧಿಯೊಳಗಾಗಿ ನಿವೇಶನದ ಶೇ. 75ರಷ್ಟು ಮೊತ್ತವನ್ನು ಸಮಿತಿಗೆ ಪಾವತಿಸುವುದು. ಹಾಗೆ ಪಾವತಿಸುವಲ್ಲಿ ವಿಫಲರಾದಲ್ಲಿ ನಂತರದ ಒಂದು ವರ್ಷದ ಅವಧಿಯಲ್ಲಿ ಬಾಕಿ ಪಾವತಿಸಬೇಕಾದ ನಿವೇಶನ ಮೌಲ್ಯವನ್ನು 04 ಸಮಾನ ಕಂತುಗಳಲ್ಲಿ (ಪ್ರತಿ 03 ತಿಂಗಳಿಗೊಮ್ಮೆ) ಶೇ. 12ರ ಬಡ್ಡಿ ದರದಲ್ಲಿ ಪಾವತಿಸಲು ಅನುಮತಿ ನೀಡುವುದು.

ತಮ್ಮ ನಂಬುಗೆಯ,

9/8/2/2023

(ಪಿ.ಎನ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಹಕಾರ ಇಲಾಖೆ.
8/2

13-2-2024



Generated from eOffice by RANJITHA V., CO-SO(RV), SECTION OFFICER, COPERATIONSEC on 21/02/2024 02:49 PM

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಹೇಳಿಕೆ :**

**ಪ್ರಸ್ತಾಪಿಸಿರುವ ವಿಷಯ:**

ರಾಣೆಬೆನ್ನೂರಿನ ವರ್ತಕರ ಸಂಘ ಇವರು ಹೂಲಿಹಳ್ಳಿ-ಕೂನಬೇವು ಉಪ ಮಾರುಕಟ್ಟೆ (ಮೆಗಾ ಮಾರುಕಟ್ಟೆ) ಪ್ರಾಂಗಣದಲ್ಲಿನ ನಿವೇಶನ ಹಂಚಿಕೆ ಬಗ್ಗೆ ದಿನಾಂಕ:10.01.2024ರಂದು ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿರುವ ಕರಾರುಗಳನ್ನು/ ವಿಧಾನಗಳನ್ನು ವಿರೋಧಿಸಿ ಅಂಗಡಿಗಳನ್ನು ಬಂದ್ ಮಾಡಿ ಧರಣಿ ಸತ್ಯಾಗ್ರಹ ನಡೆಸುತ್ತಿರುವವರು. ಈ ಒಂದು ಹೋರಾಟಕ್ಕೆ ವಾಣಿಜ್ಯೋದ್ಯಮ ಸಂಸ್ಥೆ ಮತ್ತು ಸ್ಥಳೀಯ ಶಾಸಕರು ಕೂಡ ಭೇಟಿ ನೀಡಿ ಬೆಂಬಲ ವ್ಯಕ್ತಿಪಡಿಸಿರುವವರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಧರಣಿ ಸತ್ಯಾಗ್ರಹ ನಡೆಸುತ್ತಿರುವ ವರ್ತಕರ ಸಂಘದವರು ಪ್ರಮುಖವಾಗಿ ಐದು ಬೇಡಿಕೆಗಳನ್ನು ಈಡೇರಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ರಾಣೇಬೆನ್ನೂರು ಇದರ ಆಡಳಿತಾಧಿಕಾರಿ/ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿರುವರು.

ಬೇಡಿಕೆಗಳು :-

1. ರಾಣೇಬೆನ್ನೂರು ವರ್ತಕರಿಗೆ ಎಲ್ಲಾ ನಿವೇಶನಗಳನ್ನು ಮೀಸಲಿರಿಸಿ ಹಂಚಿಕೆ ಮಾಡಬೇಕು.
2. ನಿವೇಶನ ದರಗಳನ್ನು ರೂ.250/- ಒಳಗೆ ನಿಗದಿಪಡಿಸಿ ಹಂಚಿಕೆ ಮಾಡಬೇಕು.
3. ಹಂಚಿಕೆಯ ಪ್ರಕ್ರಿಯೆಯು ಮಗಿದ ನಂತರ ನಿವೇಶನ ಮೌಲ್ಯವನ್ನು ಪಾವತಿಸಲು ಹತ್ತು ವರ್ಷಗಳ ಕಾಲಾವಕಾಶ ನೀಡಬೇಕು.
4. ಕಟ್ಟಡ ನಿರ್ಮಾಣಕ್ಕೆ ಬ್ಯಾಂಕಿನಿಂದ ಸಾಲ ಪಡೆಯಲು ನಿರಾಪೇಕ್ಷಣ ಪತ್ರ ನೀಡಬೇಕು.
5. ಕಟ್ಟಡ ನಿರ್ಮಾಣದ ಅವಕಾಶದ ಅವಧಿಯನ್ನು ಎರಡು ವರ್ಷಗಳಿಗೆ ವಿಸ್ತರಿಸಬೇಕು.

ರಾಣೇಬೆನ್ನೂರು ವರ್ತಕರು ಸಂಘದವರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಲು ಸ್ಥಳೀಯ ಶಾಸಕರನ್ನು ಒಳಗೊಂಡು ಆದಷ್ಟು ಬೇಗನೇ ಬೆಂಗಳೂರಿನಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸಮಸ್ಯಗಳಿಗೆ ಪರಿಹಾರ ಒದಗಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಕ್ಕರೆ ಸಚಿವರಲ್ಲಿ ಒತ್ತಾಯಿಸುವೆನು.

**ಹೇಳಿಕೆ :**

| ಕ್ರ.ಸಂ | ಬೇಡಿಕೆಗಳು | ಇಲಾಖಾ ವತಿಯಿಂದ ಕೈಗೊಂಡ ಕ್ರಮದ ಮಾಹಿತಿ |
|---|---|---|
| 1. | ರಾಣೇಬೆನ್ನೂರು ವರ್ತಕರಿಗೆ ಎಲ್ಲಾ ನಿವೇಶನಗಳನ್ನು ಮೀಸಲಿರಿಸಿ ಹಂಚಿಕೆ ಮಾಡಬೇಕು. | ರಾಣೇಬೆನ್ನೂರಿನ ಹೂಲಿಹಳ್ಳಿ-ಕೂನಬೇವು ಉಪ ಮಾರುಕಟ್ಟೆಯನ್ನು ರಾಜ್ಯ ಮಟ್ಟದಲ್ಲಿ ಒಂದು ಮಾದರಿ ಮಾರುಕಟ್ಟೆಯಾಗಿ ಅಭಿವೃದ್ಧಿಪಡಿಸಲು ಹಾಗೂ ಈ ಮಾರುಕಟ್ಟೆಯಲ್ಲಿ, ರಾಜ್ಯದ ಎಲ್ಲಾ ಮಾರುಕಟ್ಟೆಗಳಲ್ಲಿ ವಹಿವಾಟು ನಡೆಸುತ್ತಿರುವಂತಹ ದೊಡ್ಡ ದೊಡ್ಡ ಪ್ರಮಾಣದ ವರ್ತಕರುಗಳು ಈ ಪ್ರಾಂಗಣಕ್ಕೆ ಬಂದು ವ್ಯವಹರಿಸಲು ಅವಕಾಶ ಮಾಡಿಕೊಡುವುದರಿಂದ ಈ ಭಾಗದ ರೈತರ |

| | | |
|---|---|---|
| | | ಆ [illegible] ಚ್ಚಿನ ಸ್ಪರ್ಧೆ ಉಂಟಾಗಿ ತನ್ಮೂಲಕ ಹೆಚ್ಚಿನ ಬೆ [illegible] ಂತಾಗಲು ಅವಕಾಶ ಮಾಡಿಕೊಡುವ ಮಹತ್ವಾಕಾಂಕ್ಷೆಯಿಂದ ಸ್ಥಾಪಿಸಲಾಗಿದೆ.<br><br>ಇದರ ಜೊತೆಗೆ ಸ್ಥಳೀಯ ವರ್ತಕರಿಗೂ ಕೂಡ ಈ ಪ್ರಾಂಗಣದ ಸೌಲಭ್ಯ ಹೆಚ್ಚಿನ ಪ್ರಮಾಣದಲ್ಲಿ ದೊರಕುವಂತಾಗಲು ನಿಯಮ 7(2)ರಡಿಯಲ್ಲಿ ವಿಧಿಸಲಾಗಿದ್ದ ಒಬ್ಬರಿಗೆ ಒಂದೇ ನಿವೇಶನ/ಗೋದಾಮು ಎಂಬ ಷರತ್ತನ್ನು ಸಡಿಲಗೊಳಿಸಿ ರಾಣೆಬೆನ್ನೂರು ಸಮಿತಿಯ ಪ್ರಾಂಗಣಗಳಲ್ಲಿ ಈಗಾಗಲೇ ನಿವೇಶನ/ಕಟ್ಟಡ ಹೊಂದಿರುವವರಿಗೂ ಕೂಡ ಈ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನ ಹೊಂದಲು ಅವಕಾಶ ಕಲ್ಪಿಸಿಕೊಡಲಾಗಿದೆ ಹಾಗೂ ಲಭ್ಯವಿರುವ ನಿವೇಶನಗಳನ್ನು ಸ್ಥಳೀಯ ಹಾಗೂ ಸ್ಥಳೀಯೇತರ ವರ್ತಕರುಗಳಿಗೆ ಅನುಪಾತದ ರೀತಿಯಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿರುವಂತೆ, ಸರ್ಕಾರದ ಪತ್ರ ಸಂಖ್ಯೆ:ಸಿಇ 216 ಎಂಆರ್‌ಇ 2022, ದಿನಾಂಕ: 08/02/2023ರಲ್ಲಿ ಅನುಮತಿ ನೀಡಲಾಗಿರುತ್ತದೆ **(ಅನುಬಂಧ-1).** ಅದರಂತೆ ಸ್ಥಳೀಯರಿಗೆ ಹೆಚ್ಚಿನ ಅವಕಾಶ ದೊರಕುವಂತಾಗಲು ಲಭ್ಯವಿರುವ ನಿವೇಶನಗಳ ಶೇ.60ರಷ್ಟು ಸೌಲಭ್ಯವನ್ನು ಕಲ್ಪಿಸಲಾಗಿದೆ.<br><br>ಕೇವಲ ರಾಣೆಬೆನ್ನೂರಿನ ವರ್ತಕರಿಗೆ ಮಾತ್ರ ಈ ಪ್ರಾಂಗಣದಲ್ಲಿನ ಒಟ್ಟು 535 ನಿವೇಶನಗಳನ್ನು ಹಂಚಿಕೆ ಮಾಡಿದ್ದೇ ಆದಲ್ಲಿ, ರಾಜ್ಯದ ಇತರೆ ಮಾರುಕಟ್ಟೆಗಳಲ್ಲಿನ ವರ್ತಕರು ಈ ಪ್ರಾಂಗಣದಲ್ಲಿ ವ್ಯವಹರಿಸಲು ಅವಕಾಶವನ್ನು ಕಲ್ಪಿಸಿದಂತಾಗದೇ ಇದರಿಂದಾಗಿ ಸ್ಥಳೀಯ ವರ್ತಕರು ಈಗಾಗಲೇ ಸುಮಾರು 70 ಎಕರೆ ವಿಸ್ತೀರ್ಣದ ರಾಣೆಬೆನ್ನೂರಿನ ಮುಖ್ಯ ಮಾರುಕಟ್ಟೆ ಪ್ರಾಂಗಣದ ವ್ಯವಹಾರದ ಜೊತೆಗೆ ಈ ಉಪ ಮಾರುಕಟ್ಟೆಯಲ್ಲೂ ನಿವೇಶನಗಳನ್ನು ಕೇವಲ ತಮ್ಮ ಸಂಸ್ಥೆಯ ಶಾಖೆಗಳನ್ನಾಗಿ ಪರಿಗಣಿಸುತ್ತಾರೆಯೇ ಹೊರತು ಇದರಿಂದ ದೊಡ್ಡ ಪ್ರಮಾಣದ ವಹಿವಾಟನ್ನು ನಿರೀಕ್ಷಿಸಲು ಸಾಧ್ಯವಾಗದೇ, ಸರ್ಕಾರದ ಉದ್ದೇಶವು ನಿರೀಕ್ಷಿಸಿದಷ್ಟು ಸಫಲವಾಗುವುದಿಲ್ಲ. ಆದಕಾರಣ ಹೊರಗಿನ ವರ್ತಕರಿಗೆ ಶೇ.40ರಷ್ಟು ನಿವೇಶನವನ್ನು ಕಲ್ಪಿಸಿಕೊಡಲಾಗಿರುವ ಕ್ರಮವು ಸಮಂಜಸದಿಂದ ಕೂಡಿರುತ್ತದೆ. |
| 2. | ನಿವೇಶನ ದರ ಪ್ರತಿ ಚದರ ಅಡಿಗೆ ರೂ.250/-ರಂತೆ ನಿಗದಿಪಡಿಸಬೇಕು | ನಿವೇಶನ ದರವನ್ನು ಪ್ರತಿ ಚದರಡಿಗೆ ರೂ.450/- ರಂತೆ ನಿಗದಿಪಡಿಸಲಾಗಿತ್ತು. ತದನಂತರ ಬಂದ ಮನವಿಗಳನ್ನು ಪರಿಶೀಲಿಸಿ ಪ್ರತಿ ಚದರಡಿಗೆ ರೂ.400/-ರಂತೆ ನಿವೇಶನ ದರ ನಿಗದಿಪಡಿಸಲಾಗಿರುತ್ತದೆ. |
| 3. | ಹಂಚಿಕೆಯ ಪ್ರಕ್ರಿಯೆಯು ಮುಗಿದ ನಂತರ ನಿವೇಶನ ಮೌಲ್ಯವನ್ನು ಪಾವತಿಸಲು ಹತ್ತು ವರ್ಷಗಳ ಕಾಲಾವಕಾಶ ನೀಡಬೇಕು. | ಆಸ್ತಿ ಹಂಚಿಕೆ ನಿಯಮಗಳು 2004ರ ನಿಯಮ 10(1)(i) ರನ್ವಯ ನಿವೇಶನ ಮೌಲ್ಯವನ್ನು ಪಾವತಿಸಲು 90 ದಿನಗಳ ಕಾಲಾವಕಾಶ ನೀಡಲಾಗಿದ್ದು, ನಂತರದ ವಿಸ್ತರಿತ 60 ದಿನಗಳ ಅವಧಿಗೆ ಶೇ.12ರ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| | | ರಾಣೇಬೆನ್ನೂರು ಸಮಿತಿಯು ಹೂಲಿಹಳ್ಳಿ-ಕೂನಬೇವು ಉಪ ಮಾರುಕಟ್ಟೆ ಪ್ರಾಂಗಣದ ಅಭಿವೃದ್ಧಿಗಾಗಿ ವಿವಿಧ ಮೂಲಗಳಿಂದ ಸುಮಾರು ರೂ.70.00 ಕೋಟಿ ಸಾಲ ಹೊಂದಿದ್ದು, ಸಮಿತಿ ಆರ್ಥಿಕವಾಗಿ ಸದೃಢವಾಗಿಲ್ಲದ ಕಾರಣ ಮಾಹೆಯಾನ ಸಾಲದ ಮೊತ್ತಕ್ಕೆ ಬಡ್ಡಿ ಪಾವತಿಸುವುದು ಕಷ್ಟಕರವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ನಿವೇಶನ ಮೌಲ್ಯವನ್ನು ಪಾವತಿಸಲು 10 ವರ್ಷಗಳ ಕಾಲಾವಕಾಶ ನೀಡುವುದು ಸಮಿತಿಯ ಆರ್ಥಿಕ ಹಿತದೃಷ್ಟಿ ಮತ್ತು ಮಾರುಕಟ್ಟೆ ಅಭಿವೃದ್ಧಿ ದೃಷ್ಟಿಯಿಂದ ಸಮಂಜಸ ವಾಗಿರುವುದಿಲ್ಲ. |
| 4. | ಕಟ್ಟಡ ನಿರ್ಮಾಣಕ್ಕೆ ಬ್ಯಾಂಕ್ ನಿಂದ ಸಾಲ ಪಡೆಯಲು ನಿರಾಕ್ಷೇಪಣಾ ಪತ್ರ ನೀಡಬೇಕು | ಕಟ್ಟಡ ನಿರ್ಮಾಣಕ್ಕೆ ಸಾಲ ಪಡೆಯಲು ಆಸ್ತಿ ಹಂಚಿಕೆ ನಿಯಮಗಳು 2004ರ ನಿಯಮ 10(1)(vi)ರಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ನಿವೇಶನ ಹಂಚಿಕೆ ಪಡೆದವರು ಬ್ಯಾಂಕಿನಿಂದ ಕಟ್ಟಡ ನಿರ್ಮಾಣಕ್ಕೆ ಸಾಲ ಪಡೆಯಲು ಉದ್ದೇಶಿಸಿದಲ್ಲಿ, ರಾಣೆಬೆನ್ನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸದರಿ ನಿಯಮದಂತೆ ಕ್ರಮ ವಹಿಸುತ್ತದೆ. |
| 5. | ಕಟ್ಟಡ ನಿರ್ಮಾಣದ ಅವಕಾಶ ಅವಧಿಯನ್ನು ಎರಡು ವರ್ಷಗಳಿಗೆ ವಿಸ್ತರಿಸಬೇಕು. | ಹಂಚಿಕೆ ಪಡೆದ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ಪ್ರಾರಂಭದಲ್ಲಿ ಒಂದು ವರ್ಷ ಕಾಲಾವಕಾಶ ಇರುತ್ತದೆ. ವಿಸ್ತರಣೆಗೆ ಕೋರಿದ್ದಲ್ಲಿ ಇನ್ನೂ ಒಂದು ವರ್ಷ ಕಾಲಾವಕಾಶ ನೀಡಲು ಆಸ್ತಿ ಹಂಚಿಕೆ ನಿಯಮಗಳು 2004ರ ನಿಯಮ 10(1)(iv)ರಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ರಾಣೆಬೆನ್ನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕ್ರಮ ವಹಿಸುತ್ತದೆ. |

**ಸಂಖ್ಯೆ: ಸಿಒ 78 ಎಂಆರ್‌ಇ 2024**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು.